O.S. No.245/18     P.W. 1                                                       Dated :29-03-2022.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀಸವಾಲುಃ ಶ್ರೀ. ಎಂ.ಎನ್.ಜೆ. ಪ್ರತಿವಾದಿ ಪರ ವಕೀಲರಿಂದಃ

1) ವಾದಿಗೆ 35 ವರ್ಷ ಆಗಿರಬಹುದು. ನನಗೆ 69 ವರ್ಷ. ವಾದಿ ಆರೋಗ್ಯವಾಗಿದ್ದಾನೆಂದರೆ ಸರಿ . ವಾದಿ ನ್ಯಾಯಾಲಯಕ್ಕೆ ಹತ್ತಿರದಲ್ಲಿ ವಾಸವಾಗಿದ್ದಾನೆ ಎಂದರೆ ಸರಿಯಲ್ಲ. ವಾದಿಗೆ ಈ ಪ್ರಕರಣ ಹೂಡಲು ಇಷ್ಟವಿಲ್ಲದಿದ್ದರೂ ನಾನು ಒತ್ತಾಯ ಮಾಡಿ ಹಾಕಿಸಿದ್ದೇನೆ ಎಂದರೆ ಸರಿಯಲ್ಲ.  ನ್ಯಾಯಾಲಯಕ್ಕೆ ಬರುವಾಗ ವಾದಿ ಮತ್ತು ಲಕ್ಷ್ಮಮ್ಮ ಮತ್ತು ಪಾರ್ವತಮ್ಮರವರನ್ನು ಕಾರಿನಲ್ಲಿ ಕೂರಿಸಿಕೊಂಡೇ ಬರುತ್ತೇನೆಂದರೆ ಸರಿಯಲ್ಲ. ವಾದಿ ನಿಜಸಂಗತಿ ಹೇಳಬಹುದೆಂದು ಅವರಿಂದ ಅಧಿಕಾರ ಪತ್ರ ಪಡೆದು , ನಾನು ದಾವೆ ಹೂಡಿದ್ದೇನೆಂದರೆ ಸರಿಯಲ್ಲ. ವಾದಿ ಆರೋಗ್ಯವಾಗಿದ್ದಾನೆಂದರೆ ಸಾಕ್ಷಿಯು ಅವನು ಅವಿದ್ಯಾವಂತನಾಗಿದ್ದು , ಕಾಫಿ ತೋಟದಲ್ಲಿ ಕೂಲಿ ಮಾಡಲು ಹೋಗುತ್ತಾನೆ ಎನ್ನುತ್ತಾರೆ. ವಾದಿ ನನ್ನ ಬಳಿ ಬಂದಿಲ್ಲ , ನಾನೇ ಕೇಳಿಕೊಂಡು ಜಿ ಪಿ ಎ ಪಡೆದು ಈ ದಾವೆ ಹೂಡಿದ್ದೇನೆಂದರೆ ಸರಿಯಲ್ಲ. ಹಾಗೆಯೇ ಪಾರ್ವತಮ್ಮ ಲಕ್ಷ್ಮಮ್ಮನವರಿಂದಲೂ ಸಹ ಜಿ ಪಿ ಎ ಪಡೆದು ದಾವೆ ಹೂಡಿದ್ದೇನೆಂದರೆ ಸರಿಯಲ್ಲ.

2) ನಮಗೂ ಪ್ರತಿವಾದಿಯರಿಗೂ ನನ್ನ ತಂದೆ ಕಾಲದಿಂದಲೂ ದ್ವೇಷ ಇದೆ ಎಂದರೆ ಸರಿಯಲ್ಲ. ನ್ಯಾಯಕ್ಕಾಗಿ ದಾವೆ ಹೂಡಿದ್ದೇನೆ ಎನ್ನುತ್ತಾರೆ. ಸ.ನಂ. 14 ಚೀಕನಹಳ್ಳಿ ಗ್ರಾಮಕ್ಕೆ ಸಂಬಂಧಿಸಿದಂತೆ ನನ್ನ ತಂದೆ ಕೃಷ್ಣೇಗೌಡರವರ ಮೇಲೆ ದಾವೆ ಹೂಡಿದ್ದರು ಎಂದರೆ ಸರಿ . ಅವರ ವಿರುದ್ಧ ತಹಸೀಲ್ದಾರ್ ರವರ ನ್ಯಾಯಲಯದಲ್ಲೂ ಸಹ ಅರ್ಜಿ ಹಾಕಿದ್ದೆ ಎಂದರೆ ಸಾಕ್ಷಿಯು ಖಾತೆ ಮಾಡಿದ್ದು ತಪ್ಪೆಂದು ಹಾಕಿದ್ದೆ ಎನ್ನುತ್ತಾರೆ. ಆ ಆದೇಶದ ವಿರುದ್ಧ ಸಕಲೇಶಪುರ ಉಪ ವಿಭಾಗಾಧಿಕಾರಿಗಳವರ ನ್ಯಾಯಾಲಯದಲ್ಲಿ ಅಪೀಲು ಹಾಕಿದ್ದೆ ಎಂದರೆ ಸರಿ. ಅವರ ಆದೇಶದ ವಿರುದ್ಧ ಜಿಲ್ಲಾಧಿಕಾರಿಯವರ ನ್ಯಾಯಾಲಯಕ್ಕೂ ಅಪೀಲು ಹೂಡಿದ್ದೆ ಎಂದರೆ ಸರಿ . ನಂತರ ನನ್ನ ತಂದೆ ದಾವಾ ಸಂ. 7/99 ರಂತೆ ಕೃಷ್ಣೇಗೌಡರವರ ವಿರುದ್ಧ ದಾವೆ ಹೂಡಿದ್ದರು ಎಂದರೆ ಸರಿ . ಆ ದಾವೆ ವಜಾ ಆಯಿತು ಎಂದರೆ ಸಾಕ್ಷಿಯು ನನ್ನ ತಂದೆ ಅವಿದ್ಯಾವಂತರಾಗಿದ್ದು ನ್ಯಾಯಾಲಯಕ್ಕೆ ಸರಿಯಾದ ದಾಖಲೆ ಕೊಡದ ಕಾರಣ ವಜಾ ಆಗಿದೆ ಎನ್ನುತ್ತಾರೆ.

3) ನನ್ನ ತಂದೆ ತೀರಿಕೊಂಡ ನಂತರ ಅ .ದಾ. ನಂ. 7/99 ರಲ್ಲಿ ನಾನು ಪಕ್ಷಗಾರನಾಗಿದ್ದೆ ಎಂದರೆ ಸರಿ . ಅದರಲ್ಲಿ ನಾನೇ ಸಾಕ್ಷಿ ನುಡಿದಿದ್ದೇನೆಂದರೆ ಸರಿ . ದಾಖಲೆಗಳನ್ನು ನಾನೇ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಆ ದಾವೆ ವಜಾ ಆದಾಗ ಹಾಸನದ ಜಿಲ್ಲಾ ನ್ಯಾಯಾಲಯಕ್ಕೆ ಆರ್ ಎ . 402/2005 ರಂತೆ  ಅಪೀಲು ಹೂಡಿದ್ದೆ ಎಂದರೆ ಸರಿ . ಅದು ದಿಃ07-04-2011 ರಲ್ಲಿ ವಜಾ ಆಯಿತು ಎಂದರೆ ದಾಖಲೆ ಸರಿಯಿಲ್ಲದ ಕಾರಣ ವಜಾ ಆಯಿತು ಎನ್ನುತ್ತಾರೆ.  ಆ ಆದೇಶದ ವಿರುದ್ಧ ನಾನು ಉಚ್ಚ ನ್ಯಾಯಾಲಯಕ್ಕೆ  ಆರ್ ಎಸ್ ಎ ನಂಃ 1984/2011 ರಂತೆ ಅಪೀಲು ಹೂಡಿದ್ದೆ ಎಂದರೆ ಸರಿ . ಅದು

ದಿ:04-12-2012 ರಂದು ವಜಾ ಆಯಿತು ಎಂದರೆ ದಾಖಲೆಗಳು ಸರಿ ಇಲ್ಲದ ಕಾರಣ ವಜಾ ಆಯಿತು ಎನ್ನುತ್ತಾರೆ. ಆ ತೀರ್ಪಿನ ವಿರುದ್ಧ ನಾನು ಮೇಲ್ಮನವಿ ಮಾಡಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರಿದು ನನ್ನ ವಕೀಲರ ಸಲಹೆ ಮೇರೆಗೆ ನಾನು ಅಪೀಲಿನ ಬದಲಿಗೆ ಅ.ದಾ. 93/11 ರ ದಾವೆ ಹೂಡಿದ್ದೇನೆ ಎನ್ನುತ್ತಾರೆ.

4) ನಮ್ಮದು ಪಟೇಲ್ ಪುಟ್ಟೇಗೌಡರವರ ವಂಶ ಎಂದರೆ ಸರಿಯಲ್ಲ. ನಮ್ಮ ತಂದೆ ಪಟೇಲಿಕೆ ಇನಾಂ ತೆಗೆದುಕೊಳ್ಳುತ್ತಿದ್ದರೆಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮಗ ಅ.ದಾ. 133/17 ರಂತೆ ವಿಭಾಗ ಕೋರಿ ದಾವೆ ಹೂಡಿದ್ದ ಎಂದರೆ ಸರಿ . ಆ ದಾವೆ ವಜಾ ಆಗಿದೆ ಎಂದರೆ ಸರಿಯಲ್ಲ. ಅದು ವಜಾ ಆಗಿ ರೆಸ್ಟೋರೇಶನ್ ಗೆ ಅರ್ಜಿ ಹಾಕಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ಅದೇ ಆಸ್ತಿಯ ಮೇಲೆ ಅ.ದಾ. 330/2018 ರಂತೆ ದಾವೆ ಹೂಡಿದ್ದೇನೆ ಎಂದರೆ ಅದು ನನ್ನ ಪಿತ್ರಾರ್ಜಿತ ಆಸ್ತಿ ಎನ್ನುತ್ತಾರೆ. ಅ.ದಾ. 7/99 ರಲ್ಲಿ ಕೇಳಿದ ಪರಿಹಾರವನ್ನೇ ಈ ದಾವೆಗಳಲ್ಲೂ ಕೇಳಿದ್ದೇನೆಂದರೆ ಸರಿಯಲ್ಲ. ಕೃಷ್ಣೇಗೌಡರಿಗೆ ತೊಂದರೆ ಕೊಡುವ ಉದ್ದೇಶದಿಂದ 40 ವರ್ಷಗಳಿಂದ ದಾವೆ ಹೂಡುತ್ತಿದ್ದೇನೆಂದರೆ ಕೃಷ್ಣೇಗೌಡ ನನ್ನ ವಂಶಸ್ಥರಲ್ಲದಿದ್ದರೂ ಸಹ ನಮ್ಮ ಆಸ್ತಿಗಳನ್ನು ಅವರು ಮಾಡಿಕೊಂಡಿರುವ ಕಾರಣ ನ್ಯಾಯಕ್ಕಾಗಿ ದಾವೆ ಹೂಡುತ್ತಿದ್ದೇನೆ ಎನ್ನುತ್ತಾರೆ. ಹಿಂದಿನ ದಾವೆಗಳಲ್ಲಿ ಆಸ್ತಿಗಳು ಕೃಷ್ಣೇಗೌಡರಿಗೆ ಸೇರಿದ್ದೆಂದು ತೀರ್ಪಾಗಿದೆ ಎಂದರೆ ಅದು ಸರಿ ಇಲ್ಲ ಎಂದು ನ್ಯಾಯಾಲಯಕ್ಕೆ ಬಂದಿದ್ದೇನೆ ಎನ್ನುತ್ತಾರೆ.

5) ವಾದಿಗೆ ಹೇಮಾವತಿ ಜಲಾಶಯ ಯೋಜನೆಯಡಿಯಲ್ಲಿ ಪುನರ್ವಸತಿಗಾಗಿ ಮಂಜೂರಾದ ಆಸ್ತಿ ದಾವಾಸ್ತಿಯಾಗಿದೆ. ಹೊನ್ನವಳ್ಳಿಯಲ್ಲಿ ಮುಳುಗಡೆಯಾದ ಜಮೀನಿಗೆ ದಾವಾಸ್ತಿ ಮಂಜೂರಾಗಿದೆ. 4 ಎಕರೆ 03 ಗುಂಟೆ ಖರಾಬು 1978-79 ರಲ್ಲಿ ಮಂಜೂರಾಗಿತ್ತು. ವಳಗೇರಹಳ್ಳಿ , ಚೀಕನಹಳ್ಳಿ ಅಕ್ಕಪಕ್ಕದ ಗ್ರಾಮ ಎಂದರೆ ಸರಿ . ಸ.ನಂ. 14 ಚೀಕನಹಳ್ಳಿ ದಾವಾಸ್ತಿಗೆ ಅಕ್ಕಪಕ್ಕದ್ದು ಎಂದರೆ ಸರಿ . ಸ.ನಂ.14 ಚೀಕನಹಳ್ಳಿ ಆಸ್ತಿಯಲ್ಲಿ ಕೃಷ್ಣೇಗೌಡರವರು ಅವರ ತಂದೆ ಕಾಲದಿಂದಲೂ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. ಚೀಕನಹಳ್ಳಿಯಲ್ಲಿ ಕೃಷ್ಣೇಗೌಡರಿಗೆ ಸ.ನಂ.6 ರಲ್ಲಿ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಸ.ನಂ.6 ರಲ್ಲಿ ಇರಬಹುದು , ಸ.ನಂ. 14 ಅವರದ್ದಲ್ಲ ಎನ್ನುತ್ತಾರೆ. ಕೃಷ್ಣೇಗೌಡರವರು ಸ.ನಂ.14 ರಲ್ಲಿ ಕಾಫಿ ತೆಳೆದು ತಾತನ ಕಾಲದದಿಂದಲೂ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ವಾದಿಯ ತಂದೆಗೆ ಮಂಜೂರಾದ ಜಮೀನು ಸ.ನಂ.14 ರ ಪಕ್ಕದ್ದು ಎಂದರೆ ಸರಿಯಲ್ಲ. ವಾದಿಯ ತಂದೆಗೆ ಮಂಜೂರಾದ ಸ.ನಂ.80 ರ ಜಮೀನಿಗೆ ಪ್ರತಿವಾದಿ ಕೃಷ್ಣೇಗೌಡರವರು ದಿ:14-05-1993 ರಂದು ಸ್ವಾಧೀನಕ್ಕೆ ಹೋದರೆಂದರೆ ಸರಿಯಲ್ಲ. ವಾದಿಯ ತಂದೆ ಬಸವೇಗೌಡರವರಿಗೆ ಈ ಬಗ್ಗೆ ಖುದ್ದು ಮಾಹಿತಿ ಇತ್ತು ಎಂದರೆ ಸರಿಯಲ್ಲ. ಆನಂತರ ಕೃಷ್ಣೇಗೌಡರವರು ಆ ಆಸ್ತಿಗಳಲ್ಲಿ ಬೆಳೆ ಬೆಳೆಯುತ್ತಿದ್ದರೆಂದರೆ ಸರಿಯಲ್ಲ. ಇದಕ್ಕೆ ವಾದಿಯಾಗಲಿ , ಅವರ ತಂದೆ ಯಾಗಲಿ ಪ್ರತಿಭಟಿಸಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ಕೃಷ್ಣೇಗೌಡರು ತಹಸೀಲ್ದಾರ್ ರವರಿಗೆ ಅರ್ಜಿಯನ್ನು ಸಹಾ ಕೊಟ್ಟಿದ್ದರೆಂದರೆ ಸರಿಯಲ್ಲ. ತಹಸೀಲ್ದಾರ್ ರವರು ಎಂ.ಆರ್.3/96-97 ರಂತೆ ಕೃಷ್ಣೇಗೌಡರವರ ಹೆಸರಿಗೆ ಖಾತೆ

ಮಾಡಿದ್ದಾರೆಂದರೆ ಸಾಕ್ಷಿಯು ಬಸವೇಗೌಡರವರು 1995 ರಲ್ಲಿ ತೀರಿಕೊಂಡಿದ್ದು , ಸುಳ್ಳಾಗಿ ಖಾತೆ ಮಾಡಿದ್ದಾರೆ ಎನ್ನುತ್ತಾರೆ. ಬಸವೇಗೌಡರವರು 1997 ರಲ್ಲಿ ತೀರಿಕೊಂಡರು ಎಂದರೆ ಸರಿಯಲ್ಲ.

6) ಸ.ನಂ.78 ರಲ್ಲಿ 4 ಎಕರೆ 03 ಗುಂಟೆ ಖರಾಬು ಇದ್ದು ದುರಸ್ತಾಗಿ 3 ಎಕರೆ 37 ಗುಂಟೆಯಂತೆ ಖಾತೆ ಆಗಿದೆ ಎಂದರೆ ಸಾಕ್ಷಿಯು ವಾದಿಯ ತಂದೆ ಬಸವೇಗೌಡರವರ ಹೆಸರಿಗೆ ಖಾತೆಯಾಗಿದೆ ಎನ್ನುತ್ತಾರೆ. ಆ ಖಾತೆ ಆದೇಶವನ್ನು ವಾದಿಯಾಗಲಿ, ಅವರ ತಂದೆಯಾಗಲಿ ಪ್ರಶ್ನಿಸಿಲ್ಲ ಎಂದರೆ ಅವರಿಗೆ ತಿಳಿದಿಲ್ಲ ಎನ್ನುತ್ತಾರೆ. ಈ ದಾವೆ ಹೂಡಿದ ನಂತರ ಸದರಿ ಖಾತೆ ಆದೇಶವನ್ನು ಪ್ರಶ್ನಿಸಿದ್ದು , ಅದು ವಜಾ ಆಯಿತು ಎಂದರೆ ಸಾಕ್ಷಿಯು ಈ ಸಿವಿಲ್ ದಾವೆ ಹೂಡಿದ್ದ ಕಾರಣ ವಜಾ ಆಯಿತು ಎನ್ನುತ್ತಾರೆ.

7) ನಿಪಿ-4 ರಂತೆ ಕೃಷ್ಣೇಗೌಡರವರ ಹೆಸರಿಗೆ ಖಾತೆ ಬಂದಿದೆ ಎಂದರೆ ಸರಿ . ಈಗ ನನಗೆ ತೋರಿಸುತ್ತಿರುವ ದಾಖಲೆಯಲ್ಲಿ ಕೃಷ್ಣೇಗೌಡರ ಹೆಸರಿಗೆ ಎಂ. ಆರ್ 3/96-97 ರಂತೆ ಖಾತೆಯಾಗಿದೆ ಎಂದರೆ ಅದು ತಪ್ಪಾಗಿದೆ ಎನ್ನುತ್ತಾರೆ. 2001-2002 ರಿಂದ 2017-18 ರವರೆಗೆ ಸತತವಾಗಿ ಕೃಷ್ಣೇಗೌಡರ ಹೆಸರಿಗೆ ಆರ್ ಟಿ ಸಿ ಬಂದಿದೆ ಎಂದರೆ ಸಾಕ್ಷಿಯು ವಾದಿಯ ತಂದೆ ಅವಿದ್ಯಾವಂತರಾದ ಕಾರಣ ದಾಖಲಾತಿ ನೋಡಿಕೊಳ್ಳದ ಕಾರಣ ಆರ್ ಟಿ ಸಿ ಯಲ್ಲಿ ಬರೆದಿದೆ ಎನ್ನುತ್ತಾರೆ.

8) ಕೃಷ್ಣೇಗೌಡರವರು ದಾವಾಸ್ತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು 2008 ರಲ್ಲಿ ಕೃಷಿ ಹೊಂಡ ನಿರ್ಮಾಣಕ್ಕೆ ಸಾಲ ಮಂಜೂರು ಮಾಡಿಸಿಕೊಂಡರು ಎಂದರೆ ದಾಖಲಾತಿ ಅವರ ಹೆಸರಿನಲ್ಲಿರುವುದನ್ನು ದುರುಪಯೋಗಪಡಿಸಿಕೊಂಡು ಹಣ ಮಂಜೂರು ಮಾಡಿಸಿಕೊಂಡಿದ್ದಾರೆ ಎನ್ನುತ್ತಾರೆ. ಅವರು ದುರುಪಯೋಗಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. 1993 ರಿಂದ ಕೃಷ್ಣೇಗೌಡರವರು ಯಾವುದೇ ಅಡ್ಡಿ ಆತಂಕ ಇಲ್ಲದೆ ದಾವಾಸ್ತಿಯನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಈ ಬಗ್ಗೆ ವಾದಿ , ಅವರ ತಂದೆ , ಸಾರ್ವಜನಿಕರಿಗೆ ಖುದ್ದು ಮಾಹಿತಿ ಇದೆ ಎಂದರೆ ಸರಿಯಲ್ಲ. ಸದರಿ ಜಮೀನಿನೊಳಗೆ ಕೃಷ್ಣೇಗೌಡರು ಪ್ರತಿ ವರ್ಷ ಕಂದಾಯ ಪಾವತಿಸುತ್ತಿದ್ದಾರೆಂದರೆ ಸರಿಯಲ್ಲ. ಸುಮಾರು 7000 ಹೆಬ್ಬೇವು ಮರಗಳನ್ನು ಬೆಳೆದಿದ್ದಾರೆಂದರೆ ಸರಿಯಲ್ಲ. ಅವುಗಳ ಅಂದಾಜು ಬೆಲೆ 7 ಲಕ್ಷ ರೂ.ಗಳಾಗುತ್ತದೆ ಎಂದರೆ ಸರಿಯಲ್ಲ. ಅದರಲ್ಲಿ 500 ತೇಗದ ಮರಗಳನ್ನು ಬೆಳೆದಿದ್ದಾರೆ ಮತ್ತು ಅದರ ಬೆಲೆ 10 ಲಕ್ಷ ಗಳಾಗುತ್ತದೆ ಎಂದರೆ ಸರಿಯಲ್ಲ. 4 ಎಕರೆಯಲ್ಲಿ 7 ಸಿಲ್ವರ್ ಮರಗಳಿವೆ, 3 ಮಾವಿನ ಮರಗಳು , ಗೊಡಂಬಿ ಮರಗಳು ಇವೆ ಎಂದರೆ ಸರಿಯಲ್ಲ. ದಾವಾಸ್ತಿ ಬೆಲೆ ಇಂದಿಗೆ ಅಂದಾಜು 25 ಲಕ್ಷ ಆಗುತ್ತದೆ ಎಂದರೆ ಸರಿಯಲ್ಲ. ಆ ಕಾರಣ ಈ ನ್ಯಾಯಾಲಯದಲ್ಲಿ ಪರಿಹಾರ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

9) ದಾವಾಸ್ತಿಯ ಪೂರ್ವಕ್ಕೆ ಸುಳುಗೋಡು ಕೂಡಿಗೆ ಇದೆ. ಪಶ್ಚಿಮಕ್ಕೆ: ಸೋಮಮ್ಮನ ಜಮೀನು. ದಾವಾ ಅನುಸೂಚಿಯಲ್ಲಿ ಪಶ್ಚಿಮಕ್ಕೆ ಬಿಂದಮ್ಮನವರ ಜಮೀನು ಎಂದು ಬರೆದಿದೆ ಎಂದರೆ ಅದು ಸರಿಯಲ್ಲ ಎನ್ನುತ್ತಾರೆ. ಬಿಂದಮ್ಮ ಎಂದರೆ ಕೃಷ್ಣೇಗೌಡರ ಪತ್ನಿ ಎಂದರೆ ಇರಬಹುದು. ಪ್ರತಿವಾದಿ 23 ವರ್ಷಗಳಿಂದ ಸ್ವಾಧೀನದಲ್ಲಿರುವುದರಿಂದ

ಅವರಿಗೆ ಪ್ರತಿಕೂಲ ಸ್ವಾಧೀನದ ಮೂಲಕ ಹಕ್ಕು ಬಂದಿದೆ ಎಂದರೆ ಸರಿಯಲ್ಲ. ವಾದಿ ಮತ್ತು ಅವರ ತಂದೆ ದಾವಾಸ್ತಿ ಮೇಲೆ ಹಕ್ಕನ್ನು ಕಳೆದುಕೊಂಡಿದ್ದಾರೆಂದರೆ ಸರಿಯಲ್ಲ. ವಾದಿಯ ಪರ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಹೂಡಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.